ಮತ್ತು ಬೇರೆ ಬೇರೆ ಯೋಜನೆಗಳು ಬಂದಿದ್ದಂತಹ ಸಂದರ್ಭದಲ್ಲಿ ಕೆಲಸ ನಡೆಯುತ್ತಿಲ್ಲದಂತಹ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಅತಿ ಹೆಚ್ಚಿನ ಲೋಡ್ ಬಂದಿದೆ. ಈಗ ಕೆಲಸವೆಲ್ಲಾ ಮುಗಿದಿರುವುದರಿಂದ ಬಹಳ ಕಡಿಮೆಯಾಗಿದೆ. ಅವರೇ ಹೇಳಿದ ಪ್ರಕಾರ ೧೫೦ ಕಿಲೋ ಮೀಟರ್ ದೂರದಿಂದ ತೀರ್ಥಹಳ್ಳಿಗಾಗಲೀ, ಸಾಗರಕ್ಕಾಗಲೀ ಹೋಗಬೇಕಾಗುತ್ತದೆ. ತಾವು ಅತ್ಯವಶ್ಯಕವಾಗಿ ಅಲ್ಲಿಗೆ ಸಬ್ ಡಿವಿಜನ್ ಬೇಕು ಅನ್ನುತ್ತಿದ್ದಂತಹ ಬೇಡಿಕೆ ಏನು ಇಟ್ಟಿದ್ದೀರಿ ಅದು ನ್ಯಾಯವಾಗಿದೆ. ಇದನ್ನು ಪರಿಶೀಲನೆ ಮಾಡಿ ವಿಶೇಷ ಸಂದರ್ಭದಲ್ಲಿ ಈ ಡಿಸ್ಪೆನ್ಸ್‌ನಿಂದ ಹೋಗಿ ಆ ಸಬ್ ಡಿವಿಜನ್‌ನಲ್ಲಿ ಕೆಲಸ ಮಾಡಿಸಿಕೊಳ್ಳುವುದು ಕಷ್ಟವೆನ್ನುವ ಒಂದು ದೃಷ್ಟಿಯಿಂದ ಇದನ್ನು ಪರಿಗಣಿಸಬೇಕಾಗಿದೆ. ಇಡೀ ರಾಜ್ಯಕ್ಕೆ ಬೆಳಕು ಕೊಡುತ್ತಿರುವವರಿಗೇ ತೊಂದರೆ ಇದೆ ಎಂದು ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಅದನ್ನು ಪರಿಗಣನೆಗೆ ತೆಗೆದುಕೊಂಡು ಬೇಗ ಇದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Selection of the Places for Tea Plantation in Kodagu

882 (2141) SMT SUMA VASANTH (Virajpet).—Will the Minister for Forest be Pleased to State:—

1. Which are the places selected for Tea Plantation in Kodagu ?

2, What is the total area reserved for the said plantation and the expenditure incurred ?

3. Whether there are any instance of Tea Plantations being raised in any part of Virajpet Taluk ?

SRI G. S. BAGALKOT (Minister for Forest).—

1. Galeebeedu in Madikeri Taluk has been selected for raising Tea Plantation in Kodagu District.

2. The total area reserved is 800 hec. The amount spent so far is Rs. 101.44 lakhs.

3. This has been tried near Srimangala.

ಶ್ರೀ ಬಿ. ಲಕ್ಕಪ್ಪ (ಶ್ರೀಮತಿ ಸುಮಾ ವಸಂತರ ಪರವಾಗಿ).—ಮಡಿಕೇರಿ ಹತ್ತಿರ ಗಾಳೀಬೀಡು ಎಂಬಲ್ಲಿ ಟೀ ಪ್ಲಾಂಟೇಷನ್‌ಗೆ ೮೦೦ ಎಕರೆಗಳನ್ನು ತೆಗೆದುಕೊಂಡಿದ್ದು ೧೦೧.೪೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದಾರೆ. ಇದನ್ನು ಯಾರು ನಿರ್ವಹಿಸುತ್ತಿದ್ದಾರೆ ?

ಶ್ರೀ ಜಿ. ಎಸ್. ಬಾಗಲಕೋಟೆ.—ಈ ಯೋಜನೆಯನ್ನು ನಾವು ಈಗ ಪ್ರಾರಂಭಿಕವಾಗಿ ಕೈಗೊಂಡಿದ್ದೇವೆ. ಕರ್ನಾಟಕ ಅಭಿವೃದ್ಧಿ ನಿಗಮಕ್ಕೆ ಇದನ್ನು ಪ್ರಾರಂಭಿಕವಾಗಿ ವಹಿಸಲಾಗಿದೆ,

ಶ್ರೀ ಬಿ. ಲಕ್ಕಪ್ಪ.—ವೀರಾಜಪೇಟೆ ತಾಲ್ಲೂಕಿನ ಹತ್ತಿರ ಸಿರಿಮಂಗಳ ಎನ್ನುತಕ್ಕಂತಹ ಅರಣ್ಯ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿದ್ದು ಸಾಕಷ್ಟು ಹಣವನ್ನು ಖರ್ಚುಮಾಡಿ ಪ್ಲಾಂಟೇಷನ್ ಮಾಡಿದ್ದು ಅದನ್ನು ಹಾಳುಬಿಟ್ಟಿರುತಕ್ಕಂಥಾದ್ದು ಇದೆ. ಇದನ್ನು ಏತಕ್ಕಾಗಿ ಹಾಳು ಬಿಡಲಾಗಿದೆ ? ಸರಕಾರಕ್ಕೆ ಇದರಿಂದ ಎಷ್ಟು ನಷ್ಟವಾಗಿದೆ.

ಶ್ರೀ ಜಿ. ಎಸ್. ಬಾಗಲಕೋಟೆ.—ಸಿರಿಮಂಗಳದ ಹತ್ತಿರ ಟೀ ಪ್ಲಾಂಟೇಷನ್ ಮಾಡಿದ್ದು ೧೦ ಹೆಕ್ಟೇರ್ ಮಾತ್ರ ಅದನ್ನು ಪ್ರಾಯೋಗಿಕವಾಗಿ ಮಾಡಲಾಗಿತ್ತು. ಅಲ್ಲಿ ಮರಗಳನ್ನು ಕಡಿದು ಈ ಯೋಜನೆಯನ್ನು ಕೈಗೊಳ್ಳಬೇಕಾದ ಪ್ರಸಂಗ ಇತ್ತು. ಮುಂದೆ ಕೆಲವು ದಿವಸಗಳಲ್ಲಿ ಗುಡ್ಡೂರು ಬಳಿ ಅರಣ್ಯವಿಲ್ಲದಂತಹ ಪ್ರದೇಶಗಳಲ್ಲಿ ಈ ಟೀ ಪ್ರಾಜೆಕ್ಟ್ ಅನ್ನು ತೆಗೆದುಕೊಳ್ಳಬೇಕೆಂದು ಇದ್ದೇವೆ. ಪ್ರಾಯೋಗಿಕವಾಗಿ ಒಳ್ಳೆಯ ರೀತಿಯಿಂದ ಈ ಗುಡ್ಡೂರ್ ಬಳಿ ಈ ಪ್ರಾಜೆಕ್ಟ್ ಅನ್ನು ಕೈಗೊಳ್ಳಬೇಕೆಂದು ಸರ್ಕಾರ ವಿಚಾರ ಮಾಡುತ್ತಿದೆ.